
# ಮೇಲುಕೋಟೆಯಲ್ಲಿ ಶ್ರೀ ರಾಮಾನುಜರು


ಕಥೆ: ಮೋಹನಾ ಸೂರ್ಯನಾರಾಯಣ

ಚಿತ್ರ : ಪದ್ಮವಾಸನ್

1 ಚೋಳರಾಜ ಕಿರುಮಿಕಂಡನ್ ಶೈವನಾಗಿದ್ದ. ಶ್ರೀರಾಮಾನುಜರಿಗೆ ಹಾಗೂ ಅವರ ಶಿಷ್ಯಂದಿರಿಗೆ ಅವನು ಬಹಳ ಉಪಟಳ ಕೊಡುತ್ತಿದ್ದ. ಇದರಿಂದಾಗಿ ರಾಮಾನುಜರು ಶ್ರೀರಂಗದಿಂದ ತಮ್ಮ ಶಿಷ್ಯಂದಿರೊಡನೆ ಮೇಲುಕೋಟೆಗೆ ಬಂದರು.






3 ಕತ್ತಲಾಗುತ್ತ ಬಂತು. ಕೆಲವು ಮಂದಿ ಬೇಡರು ಅವರಿಗೆ ಕಾಣಿಸಿಕೊಂಡರು.





4
ನೀವೆಲ್ಲರೂ ಯಾರು? ಎಲ್ಲಿಂದ ಬರುತ್ತಿದ್ದೀರಿ?
ನಾವು ಶ್ರೀರಂಗದಿಂದ ಬರುತ್ತಿದ್ದೇವೆ.
ಹೌದೆ? ಅಲ್ಲಿ ರಾಮಾನುಜರು ಕ್ಷೇಮದಿಂದಿರುವರೆ?
5
ರಾಮಾನುಜರ ಬಗ್ಗೆ ನಿಮಗೆ ಹೇಗೆ ಗೊತ್ತು ?
ನೋಡಿ, ಇವರೇ ರಾಮಾನುಜರು.
ನಾವೆಲ್ಲ ನಲ್ಲಾನ್ ಚಕ್ರವರ್ತಿಯ ಶಿಷ್ಯಂದಿರು. ನಮ್ಮ ಗುರುಗಳು ರಾಮಾನುಜರ ಮಹಿಮೆಯ ಬಗ್ಗೆ ಹೇಳಿದ್ದಾರೆ.
6
ಆಹಾ! ನಿಮ್ಮ ದರ್ಶನ ಪಡೆಯಲು ನಾವೆಂಥ ಪುಣ್ಯ ಮಾಡಿದ್ದೇವೋ!
ನಲ್ಲಾನ್ ಎಂಬ ಮೋಡ ಈ ಕಾಡಿನ ನಡುವೆ ನಮ್ಮ ಮೇಲೆ ಪ್ರೀತಿಯೆಂಬ ಮಳೆಯನ್ನು ಸುರಿಸಿದೆ.
ಆ ಬೇಡರು ರಾಮಾನುಜರಿಗೆ ಹಾಗೂ ಅವರ ಶಿಷ್ಯಂದಿರಿಗೆ ಜೇನು, ರಾಗಿ ಇತ್ಯಾದಿಗಳನ್ನು ಕೊಟ್ಟರು. ಅವರನ್ನು ಸಂತೋಷಪಡಿಸಿ, ಬಳಿಕ ಅವರಿಗೆ ಮೇಲುಕೋಟೆಗೆ ದಾರಿ ತೋರಿಸಿಕೊಟ್ಟರು.
7
ಮೇಲುಕೋಟೆಯಲ್ಲಿ ತಂಗಿದ ರಾಮಾನುಜರು ಭಗವಂತನ ಸೇವೆಯಲ್ಲಿ ನಿರತರಾದರು. ಆಗ ದೇವಾಲಯದ ಉತ್ಸವಮೂರ್ತಿಯು ದೆಹಲಿಯ ಬಾದಶಹನ ಬಳಿ ಇತ್ತು. ಅದನ್ನು ಅಲ್ಲಿಂದ ತೆಗೆದುಕೊಂಡು, ಮೂರ್ತಿಯನ್ನು ಭದ್ರವಾಗಿ ಹಿಡಿದುಕೊಂಡು ಅವರು ಮರಳುತ್ತಿದ್ದರು.
ನಾರಾಯಣ!
ನಾರಾಯಣ


8
ನಾವು ಬೇಗನೆ ಮೇಲುಕೋಟೆಯನ್ನು ತಲುಪಬೇಕು. ಇಲ್ಲಿ ಡಕಾಯಿತರ ಹಾವಳಿ ಹೆಚ್ಚಾಗಿದೆ ಎಂದು ನಾವು ಕೇಳಿದ್ದೇನೆ.
ಚಿಂತೆ ಮಾಡಬೇಡ. ದೇವರು ತನ್ನನ್ನೇ ತಾನು ಕಾಪಾಡಿಕೊಳ್ಳುತ್ತಾನೆ, ನಮ್ಮನ್ನೂ ಕಾಪಾಡುತ್ತಾನೆ.
9
ಅಷ್ಟರಲ್ಲಿ ಕೈಯಲ್ಲಿ ಉರಿಯುವ ಪಂಜುಗಳನ್ನು ಹಿಡಿದ ಡಕಾಯಿತರ ಗುಂಪು ಅಲ್ಲಿಗೆ ಬಂದೇಬಿಟ್ಟಿತು.
ಏ! ಗಾಡಿ ನಿಲ್ಲಿಸಿ! ನೀವೆಲ್ಲರೂ ಇಳಿಯಿರಿ. ಬೇಗ, ಬೇಗ!
ಅಪ್ಪಾ, ನಾವು ಭಗವಂತನ ಮೂರ್ತಿಯನ್ನು ಮೇಲುಕೋಟೆಗೆ ಕೊಂಡೊಯ್ಯುತ್ತಿದ್ದೇವೆ. ನಮ್ಮಲ್ಲಿ ಬೆಲೆ ಬಾಳುವ ವಸ್ತುಗಳೇನೂ ಇಲ್ಲ.
10
ನೀವೇನೂ ಕಥೆ ಹೇಳಬೇಡಿ. ಇಳಿಯಿರಿ ಕೆಳಗೆ!
ಏಯ್! ಯಾತ್ರಿಕರನ್ನು ಕೊಳ್ಳೆ ಹೊಡೆಯುತ್ತಿದ್ದೀರಾ? ನಿಮ್ಮನ್ನು ಕೊಂದು ಹಾಕುತ್ತೇವೆ ಬನ್ನಿ!
11
ನೀವು ಒಂದು ಹೆಜ್ಜೆ ಮುಂದಿಟ್ಟರೂ ಸಾಕು, ನಿಮ್ಮ ಕತೆ ಮುಗಿದ ಹಾಗೆ! ನೀವು ಐದೇ ಜನ! ಪಟ್ಟಣದ ಜನರೆಲ್ಲರೂ ನಿಮ್ಮನ್ನು ಅಟ್ಟಿಸಿಕೊಂಡು ಬರುತ್ತಾರೆ. ಜೀವ ಬೇಕಿದ್ದರೆ, ಓಡಿ ಹೋಗಿ.
ಡಕಾಯಿತರು ಕೂಡಲೇ ಚೆದುರಿ ಓಡಿ ಹೋದರು.








''ಜಾತಿಭೇದವನ್ನು ಒಂದು ವಿಧಾನದಿಂದ ಮಾತ್ರವೇ ನಿವಾರಿಸಬಹುದು. ಆ ಮಾರ್ಗವೇ ಭಕ್ತಿ . ಭಕ್ತರಿಗೆ ಜಾತಿ ಎಂಬುದೇ ಇಲ್ಲ. ಭಕ್ತಿ ದೊರೆಯಿತು ಎಂದರೆ ದೇಹ, ಮನಸ್ಸು, ಆತ್ಮ ಎಲ್ಲವೂ ಶುದ್ಧವಾಗಿಬಿಡುತ್ತದೆ. ''

— ಶ್ರೀರಾಮಕೃಷ್ಣರು